
ISSN 2277-4041

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

# ಶಾಸನ ಅಧ್ಯಯನ

ಸಂಪುಟ-೧೧ ಸಂಚಿಕೆ-೨ ಜನವರಿ-ಜೂನ್- ೨೦೨೦



K. E. BOARD'S FIRST GRADE ARTS & COMMERCE COLLEGE

PRINCIPAL
K. E. Board's
First Grade Arts & Commerce College,
Shivaji Circle, Savadatti Road, Dharwad-6

# ಶಾಸನ ಅಧ್ಯಯನ

ಸಂಪುಟ-೧೧, ಸಂಚಿಕೆ-೨
ಜನವರಿ-ಜೂನ್ ೨೦೨೦

K. E. BOARD'S FIRST GRADE ARTS & COMMERCE COLLEGE *
DHARWAD-6
COLLEGE
CODE: 1218

ಸಂಪಾದಕರು

**ಡಾ. ಅಮರೇಶ ಯತಗಲ್**

PRINCIPAL
K. E. Board's
First Grade Arts & Commerce College,
Shivaji Circle, Savadatti Road, Dharwad-6

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

SHAASANA ADHYAYANA
Bi-Annual-Vol-11-issue-2, Jan-June-2020

Edited by
**Dr. Amaresh Yatagal**
Associate Professor/ H.O.D.,
Dept. of Epigraphy
Kannada University, Hampi
Vidyaranya 583 276

Published by
**Dr. H.D. Prashanth**
Director, Prasaranga
Kannada University, Hampi
Vidyaranya 583 276

Pages: 10 + ೧೭೨
www.kannadauniversity.org
First Impression: 2020
ISSN 2277-4041

ಶಾಸನ ಅಧ್ಯಯನ, ಅರ್ಧವಾರ್ಷಿಕ ಪತ್ರಿಕೆ
ಸಂಪುಟ-೧೧, ಸಂಚಿಕೆ-೨, ಜನವರಿ–ಜೂನ್-೨೦೨೦
(ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳ ಅಭಿಪ್ರಾಯಗಳಿಗೆ ಲೇಖಕರೇ ಜವಾಬ್ದಾರರು)
© ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೨೦
ಪ್ರಧಾನ ಸಂಪಾದಕರು: ಡಾ. ಸ.ಚಿ. ರಮೇಶ
ಸಂಪಾದಕರು: ಡಾ. ಅಮರೇಶ ಯತಗಲ್

ಸಂಪಾದಕ ಸಲಹಾ ಮಂಡಲಿ
ಡಾ. ಕಲವೀರ ಮನ್ವಾಚಾರ್, ಡಾ. ಪಿ.ವಿಸ್. ವಾಸುದೇವನ್
ಡಾ. ಕೆ. ರವೀಂದ್ರನಾಥ, ಡಾ. ವೆಂಕಟಗಿರಿ ದಳವಾಯಿ
ಬಿಡಿ ಪ್ರತಿ: ರೂ. ೧೦೦/- ವಾರ್ಷಿಕ ಚಂದಾ: ವ್ಯಕ್ತಿಗಳಿಗೆ ರೂ. ೧೫೦/-
ಸಂಸ್ಥೆಗಳಿಗೆ ರೂ. ೨೦೦/-
ಮುಖಪುಟ: ಕೆ.ಕೆ. ಮಕಾಳಿ
ಅಕ್ಷರ ಸಂಯೋಜನೆ: ಗೌತಮಿ ಗ್ರಾಫಿಕ್ಸ್, ಕಮಲಾಪುರ
ಪ್ರತಿ ದೊರೆಯುವ ಸ್ಥಳ
ಪುಸ್ತಕ ಮಾರಾಟ ಮಳಿಗೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ಕನ್ನಡ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ
[illegible] ಮೈಸೂರು ಬ್ಯಾಂಕ್ ವೃತ್ತ, ಅರಮನೆ ರಸ್ತೆ
ಬೆಂಗಳೂರು-[illegible]

ಮುದ್ರಣ
ಮಾರ್ಕೆಟಿಂಗ್ ಕಮ್ಯೂನಿಕೇಶನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು

PRINCIPAL
K. E. Board's
First Grade Arts & Commerce College
Shivaji Circle, Savadatti Road, Dharwad-6

## ಸಂಪಾದಕರ ನುಡಿ

ಪ್ರಸ್ತುತ 'ಶಾಸನ ಅಧ್ಯಯನ' ನಿಯತಕಾಲಿಕೆಯು ಸಂಪುಟ-೧೧, ಸಂಚಿಕೆ-೨ ಆಗಿದ್ದು, ಹೊಸ ಶೋಧ, ಶಾಸನಾಧ್ಯಯನ, ಶಾಸನಪ್ರಾಜ್ಞರು ಹಾಗೂ ಶಾಸನ ಕೃತಿನೋಟ ಭಾಗಗಳನ್ನು ಒಳಗೊಂಡಿದೆ. ಮೊದಲ ಭಾಗ 'ಹೊಸಶೋಧ'ದಲ್ಲಿ ಮೂರು ಅಪ್ರಕಟಿತ ಶಾಸನಗಳ ಲೇಖನಗಳಿವೆ. 'ಕೊಣ್ಣೂರು ಗ್ರಾಮದ ಅಪ್ರಕಟಿತ ವೀರಗಲ್ಲು ಶಾಸನ' ಲೇಖನವು ಡಾ. ಮಂಜುನಾಥ ಎಸ್. ಪಾಟೀಲ್ ಅವರದ್ದು. ಇದು ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಕೊಣ್ಣೂರು ಗ್ರಾಮದಲ್ಲಿಯ ೧೨ನೇ ಶತಮಾನದ ಅಪ್ರಕಟಿತ ಶಾಸನವಾಗಿದೆ. ಶಾಸನದ ಮೊದಲ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಹೋರಾಡುವುದರಿಂದ ಸಿಗುವ ಫಲವನ್ನು ಹೇಳಲಾಗಿದೆ. ಎರಡನೆಯ ಪಟ್ಟಿಕೆಯಲ್ಲಿ 'ಕಳಚುಯ್ಯ ಕಳತಿಳಕಂ' ಎಂದಿರುವುದರಿಂದ ಇದು ಕಳಚೂರಿಯರ ಕಾಲದ ಶಾಸನವಾಗಿದೆ. ಬ್ರಹ್ಮಪುರಿಗೆ ದಾನ ನೀಡಿದ ಅಂಶವೂ ಇಲ್ಲಿದೆ. ವೀರಗಲ್ಲುವಿನಲ್ಲಿ ವೀರನು ಹೋರಾಡಿ ಮಡಿದು, ಸ್ವರ್ಗಕ್ಕೆ ಹೋದ ಅಂಶವನ್ನು ವಿವರಿಸುತ್ತಾ, ಇಲ್ಲಿಯ ಶಿಲ್ಪವನ್ನು ಅತ್ಯಂತ ಸುಂದರವಾಗಿ ಕೆತ್ತಿರುವುದನ್ನು ಅದರ ಲಕ್ಷಣಗಳ ಸಮೇತವಾಗಿ ಈ ಲೇಖನದಲ್ಲಿ ವಿವರಿಸುತ್ತಾರೆ. ಆರ್.ಶೇಜೇಶ್ವರ ಅವರು 'ಆತ್ಮಬಲಿದಾನದ ಸ್ಮಾರಕ ಅಪ್ರಕಟಿತ ಶಾಸನಶಿಲ್ಪ'ವನ್ನು ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಕ್ಯಾಸನೂರು ಹೋಬಳಿಯ ಪುರಗ್ರಾಮದಲ್ಲಿ ಶೋಧಿಸಿದ್ದಾರೆ. ಈ ಆತ್ಮಬಲಿದಾನದ ಸ್ಮಾರಕ ಶಿಲ್ಪದಲ್ಲಿ ೧೨ ಸಾಲಿನ ಶಾಸನವೂ ಇದೆ. ಇದು ಕ್ರಿ.ಶ.೧೨೨೫ರ ಹೊಯ್ಸಳರ ೨ನೆಯ ನರಸಿಂಹನ ಅವಧಿಯದು. ಈ ಶಾಸನದಲ್ಲಿ ಆತ್ಮಬಲಿದಾನ ಮಾಡಿಕೊಂಡ ವೀರನು, ಸಕಲ ವಸ್ತು ಸಮಸ್ತ ಕುಟುಂಬ ಸಮೇತವಾಗಿ ಪುರಗ್ರಾಮದ ಪಕ್ಕದ ಸಾವಗದ್ದೆಯ ಚಿಣ್ಣಮಗೌಡ, ಪಾಂಡ್ಯಮಗೌಡ, ಕಲಿಗೌಡ, ಹೇಂಮಗೌಡ, ಬೆಲೂರವಾಂದಮಗೌಡ, ಮರದ ಹತ್ತಿರ ಬರುವ ಕುಪ್ಪೆಯ ಗ್ರಾಮ ಮಠ ಹಾಗೂ ಇಲ್ಲಿಯ ಮಾರಸಿಂಗನ ಉಲ್ಲೇಖಗಳು ಬಂದಿವೆ. ಶಿಲ್ಪದಲ್ಲಿ ಸೋಮನಾಥ ದೇವರ ಸಮ್ಮುಖದಲ್ಲಿ ಆತ್ಮಬಲಿದಾನ ಮಾಡಿಕೊಂಡಿರುವ ಹಾಗೂ ಇಲ್ಲಿ ತಕ್ಕಡಿಯ ಶಿಲ್ಪ ಇರುವುದು ವಿಶೇಷವಾಗಿದೆ. ಹೀಗಾಗಿ ಇದೊಂದು ಅಪರೂಪದ ಶಾಸನಶಿಲ್ಪವಾಗಿದೆ.

[illegible] ಡಾ. ಕಲವೀರ ಮನ್ವಾಚಾರ್, ಡಾ. ಕೆ. ರವೀಂದ್ರನಾಥ, ಡಾ. ಸಿ.ಎಸ್. ವಾಸುದೇವನ್ ಮತ್ತು ಡಾ. ವೆಂಕಟಗಿರಿ ದಳವಾಯಿ ಅವರು ಸಲಹೆ ಸೂಚನೆಗಳನ್ನು ನೀಡಿ ಸಹಕರಿಸಿದ್ದಾರೆ ಹಾಗೂ ಪ್ರಸಾರಾಂಗದ ನಿರ್ದೇಶಕರಾದ ಡಾ. ಎಚ್.ಡಿ. ಪ್ರಶಾಂತ್ ಅವರ ಸತತವಾದ ಪ್ರೇರಣೆ ಹಾಗೂ ಒತ್ತಾಯವಿಲ್ಲದಿದ್ದರೆ ಈ ನಿಯತ ಮಾಲಿಕೆಯು ಹೊರಬರಲು ಸಾಧ್ಯವಾಗುತ್ತಿರಲಿಲ್ಲ. ಹೀಗಾಗಿ ಅವರ ಕಾಳಜಿಗೆ ಋಣಿಯಾಗಿರುವೆ. ಅಲ್ಲದೆ ಪ್ರಸಾರಾಂಗದ ಉಪನಿರ್ದೇಶಕರಾದ ಶ್ರೀ ಬಿ. [illegible]ಮೂರ್ತಿ, ಶ್ರೀ ಎಚ್.ಬಿ.ರವೀಂದ್ರ, ಸಹಾಯಕ ನಿರ್ದೇಶಕರಾದ ಶ್ರೀ ಸಿ.ಸಿ. ಪೂವಯ್ಯ, ಶ್ರೀ ಕೆ.ಎಲ್. ರಾಜಶೇಖರ್ ಹಾಗೂ ಪ್ರಸಾರಾಂಗದ ಎಲ್ಲಾ ಸಿಬ್ಬಂದಿಗಳಿಗೆ ಮುಖಪುಟ ರಚಿಸಿದ ಶ್ರೀ ಕೆ.ಕೆ. ಮಕಾಳಿ ಹಾಗೂ ಡಿ.ಟಿ.ಪಿ. ಮಾಡಿದ ಗೌತಮಿ ಗ್ರಾಫಿಕ್ಸ್‌ನ ಶ್ರೀಮತಿ ವಸಂತಲಕ್ಷ್ಮಿ ಮುಂತಾದವರಿಗೆ ಅನಂತ ಧನ್ಯವಾದಗಳನ್ನರ್ಪಿಸುವೆನು.

**ಡಾ. ಅಮರೇಶ ಯತಗಲ್**
ಸಂಪಾದಕ

K. E. BOARD'S FIRST GRADE ARTS & COMMERCE COLLEGE ★ DHARWAD-6 COLLEGE CODE: 1218

## ಪರಿವಿಡಿ

**ಹೊಸಶೋಧ**

೧. ಕೊಣ್ಣೂರು ಗ್ರಾಮದ ಅಪ್ರಕಟಿತ ವೀರಗಲ್ಲು ಶಾಸನ / ೧
**ಡಾ. ಮಂಜುನಾಥ ಎಸ್. ಪಾಟೀಲ್**

೨. ಆತ್ಮಬಲಿದಾನದ ಸ್ಮಾರಕ ಅಪ್ರಕಟಿತ ಶಾಸನಶಿಲ್ಪ / ೫
**ಆರ್. ಶೇಜೇಶ್ವರ**

೩. ಕಾಳತಮ್ಮನಹಳ್ಳಿಯ ಟಿಪ್ಪುಸುಲ್ತಾನ್ ಕಾಲದ ಅಪ್ರಕಟಿತ ಶಾಸನ / ೧೧
**ಕೆ. ಧನಪಾಲ್**

**ಶಾಸನ ಅಧ್ಯಯನ**

೪. ಶಾಸನಗಳಲ್ಲಿ ಚಿಗುರೊಡೆದ ಮೊದಲ ಛಂದಸ್ಸುಗಳು / ೨೨
**ಡಾ. ವಿ. ಜಯರಾಮಯ್ಯ**

೫. ಮುಧೋಳ ನಗರದ ಶಾಸನಗಳು ಮತ್ತು ಪ್ರಾಚೀನ ದೇವಾಲಯಗಳು / ೩೭
**ಸುನೀಲ ಕುಸ್ತಿ**

೬. ಶಿವಮೊಗ್ಗ ಜಿಲ್ಲೆಯ ರಾಷ್ಟ್ರಕೂಟರ ಶಾಸನಗಳು / ೪೪
**ಡಾ. ಕಲವೀರ ಮನ್ವಾಚಾರ್**

೭. ಹುನಗುಂದ ತಾಲೂಕಿನ ಶಾಸನೋಕ್ತ ಶಾಪಾಶಯಗಳು / ೫೧
**ಓಜರಾಬಿ ನದಾಫ್**

೮. ಕಲ್ಯಾಣ ಚಾಲುಕ್ಯರ ಆರಂಬಿಕ ಶಾಸನಗಳಲ್ಲಿ ಒತ್ತಕ್ಕರ / ೫೪
**ಡಾ. ಬಸವರಾಜ ಕೋಡಗುಂಟಿ ಮತ್ತು ಡಾ. ಅಶೋಕ ಬಾಬು**

೯. ಕೊಪ್ಪಳದ ಶಾಸನವೊಂದರ ಸರಿಯಾದ ಕಾಲ: ಸಂಕ್ಷಿಪ್ತ ವಿಶ್ಲೇಷಣೆ / ೬೪
**ಎಸ್. ಕಾರ್ತಿಕ್**

೧೦. ಕುಂದಗೋಳ ತಾಲ್ಲೂಕಿನ ಶಾಸನೋಕ್ತ ಶೈವ ದೇವಾಲಯಗಳು / [illegible]
**ಡಾ. ಸುರೇಶ ಕ. ಹಾನಗಲ್ಲ**

PRINCIPAL
K. E. Board's
First Grade Arts & Commerce College,
Shivaji Circle, Savadatti Road, Dharwad-

೧೧

# ಕುಂದಗೋಳ ತಾಲ್ಲೂಕಿನ ಶಾಸನೋಕ್ತ ಶೈವ ದೇವಾಲಯಗಳು

ಡಾ. ಸುರೇಶ ಕ. ಹಾನಗಲ್ಲ

## ಪ್ರಸ್ತಾವನೆ

ಧಾರವಾಡ ಜಿಲ್ಲೆಯ ತಾಲೂಕು ಕೇಂದ್ರವಾದ "ಕುಂದಗೋಳ" ಧಾರವಾಡ ದಿಂದ ಆಗ್ನೇಯಕ್ಕೆ ೨೬ ಕಿ.ಮೀ. ಅಂತರದಲ್ಲಿದೆ. ಭೌಗೋಳಿಕವಾಗಿ ೬೪೮.೫ ಚ.ಕಿ.ಮೀ. ವಿಸ್ತೀರ್ಣವನ್ನು ಹೊಂದಿದ್ದು, ಸಮುದ್ರಮಟ್ಟದಿಂದ ೬೩೦.೧೧ ಮೀ. ಎತ್ತರದಲ್ಲಿದೆ. ಹಾಗೆಯೇ ೧೬ರಿಂದ ೩೭ ಉತ್ತರ ಅಕ್ಷಾಂಶದಿಂದ ೭೫.೯–೭೫. ೨೬ ಪೂರ್ವ ರೇಖಾಂಶದವರೆಗಿನ ಚೌಕಟ್ಟಿನಲ್ಲಿರುವ ಈ ತಾಲೂಕು ೫೭ ಗ್ರಾಮಗಳನ್ನು ಒಳಗೊಂಡಿದೆ.[1]

ಈ ಪ್ರದೇಶವನ್ನು ಅನೇಕ ರಾಜವಂಶಗಳು ಅಂದರೆ ಬಾದಾಮಿ ಚಾಲುಕ್ಯರ ಕಾಲದಿಂದ, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಲಚೂರಿ, ದೇವಗಿರಿ ಯಾದವರು, ಹೊಯ್ಸಳರು, ಮಹಾಮಂಡಳೇಶ್ವರರು, ಗೋವಾ ಕದಂಬರು ಹಾಗೂ ಹಾನಗಲ್ ಕದಂಬರು ಆಳಿ–ಅಳಿದುದುನ್ನು ಕಾಣಬಹುದಾಗಿದೆ. ಈ ಮನೆತನಗಳು ತಮ್ಮದೇ ಆದ ಪುರಾತತ್ವ ಮತ್ತು ಸಾಹಿತ್ಯಿಕ ಕೊಡುಗೆಗಳನ್ನು ನೀಡಿದ್ದಾರೆ. ಅಂತವುಗಳಲ್ಲಿ ದೇವಾಲಯಗಳು ಪ್ರಮುಖವಾದವುಗಳಾಗಿವೆ.

ದೇವಾಲಯಗಳು ಸಾಂಸ್ಕೃತಿಕ ಕೇಂದ್ರವಾಗಿದ್ದು, ಇಲ್ಲಿ ಎರಡು ಶಬ್ದಗಳಿವೆ. ದೇವ ಮತ್ತು ಆಲಯ ಅಂದರೆ ದೇವರಮನೆ, ದೇವರ ಆಲಯ, ದೇವರ ಕಟ್ಟಡ ಅಂದರೆ ದೇವರು ಇರತಕ್ಕಂತಹ ಸ್ಥಾನ ಎಂದರ್ಥ.[2] ದೇವಾಲಯಗಳು ಮಾನವನ ಬದುಕಿನಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿದ್ದಲ್ಲದೇ ಇವು ಸಾಮೂಹಿಕ ಪೂಜೆ, ಪ್ರಾರ್ಥನೆಗಳನ್ನು



ಸಲ್ಲಿಸುವ ಅನುಕೂಲಕರವಾಗಿರುವ ಒಂದು ತಾಣವಾಗಿದೆ. ಒಟ್ಟಾರೆ ಇವು ಸಮಾಜದ ಧಾರ್ಮಿಕ ಶ್ರದ್ಧೆ ಹಾಗೂ ಭಕ್ತಿಯ ಪ್ರತೀಕ. ಹಾಗೆಯೇ ನಮ್ಮ ಭವ್ಯ ಸಾಂಸ್ಕೃತಿಕ ಪರಂಪರೆ ನಾಡಿಯನ್ನು ಹಿಡಿದು ನಡೆಸುತ್ತಿರುವಂತಹ ಸಾಂಸ್ಕೃತಿಕ ನೆಲೆಗಳಾಗಿವೆ.[3] ಒಟ್ಟಾರೆ ಮಾನವನು ತನ್ನ ಪ್ರಾಪಂಚಿಕ ಸುಖವನ್ನು ಪಡೆಯಲು, ಜಗತ್ತಿನ ಸೃಷ್ಟಿಕರ್ತ ಹಾಗೂ ನಿಯಂತ್ರಕನಾದ ದೇವರ ಬಳಿ ಹೋಗಲು ಸರಿಯಾದ ಮಾರ್ಗವನ್ನು ತೋರಿಸುವಂತೆ ಆತನನ್ನು ಧ್ಯಾನಿಸಲು, ಮನಸ್ಸಿಗೆ ಶಾಂತತೆ ಪಡೆಯಲು ದೇವಾಲಯ ಗಳು ಅವಶ್ಯಕ.[4]

ಪ್ರಸ್ತುತ ಕುಂದಗೋಳ ತಾಲೂಕಿನಲ್ಲಿ ೧೫ ಗ್ರಾಮಗಳಲ್ಲಿ ೬೧ ಶಾಸನಗಳು ಉಲ್ಲೇಖಿತವಾಗಿದ್ದು, ಇಲ್ಲಿ ಕಂಡು ಬರುವ ಶಾಸನೋಕ್ತ ಶೈವದೇವಾಲಯಗಳನ್ನು ಕುರಿತು ಚರ್ಚಿಸುವುದು ಈ ಲೇಖನದ ಉದ್ದೇಶವಾಗಿದೆ.

| ಕ್ರಸಂ. | ಗ್ರಾಮ | ಅರಸ | ಶಾಸನೋಕ್ತ ಹೆಸರು | ಕಾಲ | ಪ್ರಕಟಣೆ |
|---|---|---|---|---|---|
| ೧. | ಕುಂದಗೋಳ | ಸೋಮೇಶ್ವರ | ಬಾಲಚಂದ್ರೇಶ್ವರ | ೧೦೪೪ | Sii.vol.xx. 29 |
| ೨. | ಕುಯಿಬಾಳ | ಸೋಮೇಶ್ವರ | ಜೋಗೇಶ್ವರ | ೧೦೫೮ | Sii.vol.xx. 38 |
| ೩. | ಗುಡಗೇರಿ | ಸಿಂಘಣ | ನಾಗೇಶ್ವರ | ೧೧೩೯ | Sii.vol.xv. 110 |
| ೪. | ಕಳಸ | ಜಯಕೇಶಿ | ಸೇಣಿಗೇಶ್ವರ | ೧೧೩೯ | – |
| ೫. | ಗುಡಗೇರಿ | – | ಕಲಿದೇವಸ್ವಾಮಿ | ೧೨ನೇ | – |
| ೬. | ಗುಡಗೇರಿ | ಸಿಂಘಣ | ಕಾಳೇಶ್ವರ | ೧೨೧೭ | Sii.vol.xx. 193 |

### ಕಲ್ಮಠ ದೇವಾಲಯ

ಗ್ರಾಮ : ಗುಡಗೇರಿ — ಸ್ಥಳ : ಗ್ರಾಮದ ಮಧ್ಯೆ

ತಾಲೂಕು: ಕುಂದಗೋಳ — ಕಾಲ : ೧೦ ನೇ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ — ವಸ್ತು : ಕಪ್ಪುಶಿಲೆ

ಕುಂದಗೊಳದಿಂದ ಆಗ್ನೇಯಕ್ಕೆ ೨೬ ಕಿ.ಮೀ. ಅಂತರದಲ್ಲಿರುವ, ಗುಡಗೇರಿಯ ಮಧ್ಯದಲ್ಲಿ ಎರಡು ದೇವಾಲಯ ಕಂಡುಬರುತ್ತವೆ. ಮೊದಲನೆಯ ದೇವಾಲಯ ಉತ್ತರಾಭಿಮುಖ ವಾಗಿದ್ದು, ಗರ್ಭಗೃಹ ಮತ್ತು ನವರಂಗವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಮಧ್ಯ ಶಿವಲಿಂಗವಿದೆ. ಇದರ ಪ್ರವೇಶದ್ವಾರವು ತ್ರಿಶಾಖಾಲಂಕಾರ ದಿಂದ ಕೂಡಿದ್ದು, ಲಲಾಟಲ್ಲಿ ಗಜಲಕ್ಷ್ಮೀ ಚಿತ್ರವನ್ನು ಬಿಂಬಿಸುತ್ತದೆ. ಇದಕ್ಕೆ ಹೊಂದಿ ಕೊಂಡಂತೆ ನವರಂಗದ ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಈ ಕಂಬಗಗಳು ಚೌಕಾಕಾರದ ಪೀಠ. ಕಾಂಡ ಮತ್ತು ಬೋಧಿಗೆಗಳಿಂದ ಕೂಡಿದೆ.

ಎರಡನೇ ದೇವಾಲಯ ಪೂರ್ವಾಭಿಮುಖವಾಗಿದ್ದು, ಒಂದು ಕೇವಲ ನವರಂಗ [illegible]ಇದೆ. ಈ ನವರಂಗದಲ್ಲಿ ನಾಲ್ಕು ಸ್ತಂಭಗಳಿವೆ. ಇವುಗಳು ಪೀಠ, ಚೌಕ,

PRINCIPAL
K. E. Board's
First Grade Arts & Commerce College
Shivaji Circle, Savadatti Road, Dharwad-6

ವೃತ್ತಾಕಾರ ದಿಂಡುಗಳು, ಘಂಟಾಕಾರ, ಕಳಶ ಮತ್ತು ಸರಳ ಬೋಧಿಗೆಯಿಂದ ಕೂಡಿರುವುದನ್ನು ಕಾಣುತ್ತೇವೆ.[5]

**ಶಂಭುಲಿಂಗ ದೇವಾಲಯ**

| | | | |
|---|---|---|---|
| ಗ್ರಾಮ | : ಕುಂದಗೋಳ | ಸ್ಥಳ | : ಪೇಟೆಯ ಮಧ್ಯದಲ್ಲಿ |
| ತಾಲೂಕು: | ಕುಂದಗೋಳ | ಕಾಲ | : ೧೧ನೇ ಶತಮಾನ |
| ಶೈಲಿ | : ಕಲ್ಯಾಣ ಚಾಲುಕ್ಯ | ವಸ್ತು | : ಕಪ್ಪು ಶಿಲೆ |

ಹುಬ್ಬಳ್ಳಿಯಿಂದ ಆಗ್ನೇಯಕ್ಕೆ ಸುಮಾರು ೧೫ ಕಿ.ಮೀ. ಅಂತರದಲ್ಲಿರುವ ಈ ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ರಂಗಮಂಟಪ ಇದೆ. ಗರ್ಭಗೃಹವು ಚೌಕಾಕಾರವಾಗಿದೆ. ಮಧ್ಯದಲ್ಲಿ ವೃತ್ತಾಕಾರದ ಶಿವಲಿಂಗವಿದೆ. ಇದರ ಪ್ರವೇಶ ದ್ವಾರವು ಆರು ಆಲಂಕೃತ ಶಾಖೆಗಳನ್ನು ಹೊಂದಿದ್ದು, ಅದರಲ್ಲಿ ರತ್ನಪಟ್ಟಿ, ಲತಾಸುರುಳಿ, ವಾದ್ಯಗಾರ, ಸ್ತಂಭ, ಹೂಬಳ್ಳಿ ಹಾಗೂ ಪದ್ಮಗಳನ್ನು ಒಳಗೊಂಡಿದೆ. ಲಲಾಟಪಟ್ಟಿಕೆಯಲ್ಲಿ ಗಜಲಕ್ಷ್ಮೀ ಇದೆ. ಇದರ ಇಕ್ಕೆಲಗಳಲ್ಲಿ ಬಾಳೆದಿಂಡಿನ ಅಲಂಕರಣವಿದೆ. ಲಲಾಟ ಪಟ್ಟಿಕೆಯ ಮೇಲೆ ಕಪೋತವಿದೆ. ಇದಕ್ಕೆ ಹೊಂದಿಕೊಂಡಂತೆ ಪಂಚ ದ್ರಾವಿಡ ಕಿರುದ್ವಿತಲ ವಿಮಾನವಿದೆ. ಇದರ ಕೆಳತಲದ ಮಧ್ಯದಲ್ಲಿ ಭೈರವ, ಕೊನೆಗೆ ಸ್ತ್ರೀ ಶಿಲ್ಪಗಳಿವೆ.

ಇದಕ್ಕೆ ಹೊಂದಿಕೊಂಡಂತೆ ಮೂರು ಅಂಕಣಗಳಿಂದ ಕೂಡಿದ ಆಯತಾಕಾರದ ಅಂತರಾಳವಿದೆ. ಇಲ್ಲಿ ಎರಡು ದೇವಕೋಷ್ಠಕಗಳಿದ್ದು, ಒಂದರಲ್ಲಿ ಗಣೇಶ ಇನ್ನೊಂದರಲ್ಲಿ ಪಾರ್ವತಿ ಉಬ್ಬು ಶಿಲ್ಪವಿದೆ. ಅಂತರಾಳದ ಪ್ರವೇಶದ್ವಾರವು ತ್ರಿಶಾಖಾಲಂಕಾರದಿಂದ ಆವೃತವಾಗಿವೆ. ಲಲಾಟಪಟ್ಟಿಕೆಯಲ್ಲಿ ಗಣೇಶನನ್ನು ಬಿಂಬಿಸಲಾಗಿದೆ. ಹಾಗೆಯೇ ಲಲಾಟಬಿಂಬದಲ್ಲಿ ಬಾಳೆದಿಂಡಿನ ಅಲಂಕಾರವಿದ್ದು, ಈ ತೋರಣದ ಮಧ್ಯದಲ್ಲಿ ಲಕ್ಷ್ಮಣ, ರಾಮ ಸೀತೆಯರ ಶಿಲ್ಪಗಳನ್ನು ಕಾಣುತ್ತೇವೆ. ಅಂತರಾಳಕ್ಕೆ ಹೊಂದಿಕೊಂಡಂತೆ ಸಭಾಮಂಟಪವಿದ್ದು, ಇದು ಪಂಚ ಪ್ರವೇಶದ್ವಾರವನ್ನು ಹೊಂದಿದೆ ಎಂದು ಗೆರಾಲ್ಡ್ ಅವರು ಸೂಚಿಸಿದ್ದಾರೆ. ಅದೇ ರೀತಿ ಈ ಸಭಾಮಂಟಪದಲ್ಲಿ ೨೪ ದೊಡ್ಡ ಹಾಗೂ ೨೮ ಚಿಕ್ಕ ಸ್ತಂಬಗಳು ಇವೆ. ಈ ಸ್ಥಂಭಗಳು ಶ್ರೀಕಾರ ಮಾದರಿಯಲ್ಲಿದ್ದು, ಪೀಠ, ಚೌಕ, ಘಂಟಾಕೃತಿ, ಕಳಸ, ಫಲಕ ಮತ್ತು ಸರಳ ಬೋದಿಗೆಯಿಂದ ಆವೃತವಾಗಿದೆ. ಈ ಸಭಾಮಂಟಪದ ಸುತ್ತಲೂ ಕಕ್ಷಾಸನವಿದ್ದು, ಇಲ್ಲಿ ೨೮ ಚಿಕ್ಕ ಸ್ತಂಭಗಳನ್ನು ಕಾಣುತ್ತೇವೆ. ಈ ಸಭಾಮಂಟಪದ ಪ್ರತಿ ಅಂಕಣದಲ್ಲಿಯೂ ಒಂದು, ಮೂರು, ಒಂಬತ್ತು, ಪದ್ಮಗಳ ಅಂಕರಣವಿದ್ದು, ವಿತಾನದ ಮಧ್ಯಭಾಗದಲ್ಲಿ ಅಪಸ್ಮಾರನ ಮೇಲೆ ನರ್ತಿಸುತ್ತಿರುವ ನಟರಾಜನನ್ನು ಗುರುತಿಸಬಹುದಾಗಿದೆ. ಇವನ ಸುತ್ತಲೂ ಅಷ್ಟದಿಕ್ಪಾಲಕರಿದ್ದು, ಅವರು ತಮ್ಮ ವಾಹನದ ಮೇಲಿರುವುದನ್ನು ಕಾಣುತ್ತೇವೆ. ಮೂರು



ಶಿವಲಿಂಗ ಮತ್ತು ಒಂದು ಸಪ್ತಮಾತೃಕೆ ಇದ್ದು, ಅಂತರಾಳದ ಅಭಿಮುಖವಾಗಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ.

ದೇವಾಲಯದ ಹೊರಭಾಗವು ಜೀರ್ಣೋದ್ಧಾರವಾಗಿದ್ದು, ಅಧಿಷ್ಠಾನ, ಭಿತ್ತಿ, ಕಪೋತ, ಹಾರ ಮತ್ತು ಆಧುನಿಕ ಕಾಲದ ಶಿಖರವಿದೆ. ಅಧಿಷ್ಠಾನ, ಉಪಾನ, ಜಗತಿ, ಕುಮುದ, ಮಕರಪಟ್ಟಿಕಾ ಮತ್ತು ಕಪೋತ ಭಾಗಗಳನ್ನು ಒಳಗೊಂಡಿದೆ. ಮಕರಪಟ್ಟಿಕೆಯಲ್ಲಿ ದೇವ-ದೇವತೆಯರ ಶಿಲ್ಪಗಳಿವೆ. ಈ ದೇವಾಲಯದ ಪ್ರವೇಶದ್ವಾರವು ಸರಳ ಪಂಚಶಾಖೆಗಳಿಂದ ಕೂಡಿದೆ.[6]

**ರಾಮೇಶ್ವರ ದೇವಾಲಯ**

| | | | |
|---|---|---|---|
| ಗ್ರಾಮ | : ಕಮಡೊಳ್ಳಿ | ಸ್ಥಳ | : ಗ್ರಾಮದ ಹೊರಭಾಗ |
| ತಾಲೂಕು: | ಕುಂದಗೋಳ | ಕಾಲ | : ೧೧ನೇ ಶತಮಾನ |
| ಶೈಲಿ | : ಕಲ್ಯಾಣ ಚಾಲುಕ್ಯ | ವಸ್ತು | : ಕಪ್ಪು ಶಿಲೆ |

ಕುಂದಗೋಳದಿಂದ ದಕ್ಷಿಣಕ್ಕೆ ೧೦ ಕಿ.ಮೀ. ದೂರದಲ್ಲಿರುವ ರಾಮೇಶ್ವರ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವು ಪಂಚರಥ ಮಾದರಿಯಲ್ಲಿದೆ. ತ್ರಿರ್ಯಾಭಿಮುಖವಾಗಿ ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಒಳಗೊಂಡಿದೆ. ಗರ್ಭಗೃಹದ ಮಧ್ಯದಲ್ಲಿ ಶಿವಲಿಂಗವಿದ್ದು, ಪ್ರವೇಶದ್ವಾರವು ಪಂಚಶಾಖೆಗಳಿಂದ ಕೂಡಿದೆ. ಇದರ ಮುಂಭಾಗದಲ್ಲಿ ಅಂತರಾಳವಿದ್ದು, ಎರಡು ಸ್ತಂಭಗಳು ಇವೆ. ಪೀಠ, ಕಾಂಡ, ಕಳಶ, ಫಲಕ ಬೋದಿಗೆಯನ್ನು ಒಳಗೊಂಡಿದ್ದು, ಎರಡು ಮಕರಗಳ ಬಾಯಿಂದ ಹೊರಟ ಸುರುಳಿಯಾಕಾರದ ತೋರಣವಿದೆ. ಈ ತೋರಣವು ತುಂಬಾ ದೊಡ್ಡದಾಗಿದ್ದು, ಮೇಲ್ಭಾಗದಲ್ಲಿ ಅಷ್ಟದಿಕ್ಪಾಲಕರ ಮತ್ತು ಕೆಳಭಾಗದಲ್ಲಿ ಬ್ರಹ್ಮ, ನಟರಾಜ ಮತ್ತು ವಿಷ್ಣುವಿನ ಕಿರಿಶಿಲ್ಪಗಳಿವೆ.

ಅಂತರಾಳಕ್ಕೆ ಹೊಂದಿಕೊಂಡಂತೆ ನವರಂಗವಿದ್ದು, ಭಿತ್ತಿಯಲ್ಲಿ ಹನ್ನೆರಡು ಅರೆಗಂಬಗಳನ್ನು ಮತ್ತು ಮಧ್ಯದಲ್ಲಿ ನಾಲ್ಕು ಕಂಬಗಳು ಇವೆ. ಈ ಸ್ತಂಭಗಳು ಶ್ರೀಕಾರ ಶೈಲಿಯಲ್ಲಿದ್ದು, ವಿತಾನದಲ್ಲಿ ಅರಳಿದ ಪದ್ಮವಿದೆ. ಜೊತೆಗೆ ನವರಂಗದಲ್ಲಿ ಎರಡು ಆಧುನಿಕ ದೇವಕೋಷ್ಠಕಗಳಿದ್ದು, ಒಂದರಲ್ಲಿ ರಾಮ, ಲಕ್ಷ್ಮಣ ಮತ್ತು ಗಣೇಶನ ಉಬ್ಬುಶಿಲ್ಪವಿದೆ. ನವರಂಗಕ್ಕೆ ಹೊಂದಿಕೊಂಡಂತೆ, ಗರ್ಭಗೃಹದ ಅಭಿಮುಖವಾಗಿ ರಚಿಸಿದ ಒಂದು ಗರ್ಭಗೃಹವಿದ್ದು, ಅಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಿ ಕಟ್ಟಡ ಆಧುನೀಕರಣವಾಗಿದೆ.[7]

**ಸಿದ್ದೇಶ್ವರ ದೇವಾಲಯ**

| | | | |
|---|---|---|---|
| ಗ್ರಾಮ | : ಕುಂದಗೋಳ | ಸ್ಥಳ | : ಗ್ರಾಮದ ಹೊರಭಾಗ |
| ತಾಲೂಕು : | ಕುಂದಗೋಳ | ಕಾಲ | : ೧೨ನೇ ಶತಮಾನ |
| ಶೈಲಿ | : ಕಲ್ಯಾಣ ಚಾಲುಕ್ಯ | ವಸ್ತು | : ಕಪ್ಪು ಶಿಲೆ |

PRINCIPAL
K. E. Board's
First Grade Arts & Commerce College,
Shivaji Circle, Savadatti Road, Dharwad-6

ಕುಂದಗೋಳದಿಂದ ಆಗ್ನೇಯಕ್ಕೆ ೧೦ ಕಿ.ಮೀ. ದೂರದಲ್ಲಿ ಸಿದ್ಧೇಶ್ವರ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯ ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಮಧ್ಯದಲ್ಲಿ ಶಿವಲಿಂಗವಿದೆ. ಇದರ ಪ್ರವೇಶದ್ವಾರವು ತ್ರಿಶಾಖಾಲಂಕಾರದಿಂದ ಕೂಡಿದ್ದು, ಲಲಾಟ ಪಟ್ಟಿಕೆಯಲ್ಲಿ ಗಜಲಕ್ಷ್ಮೀಯ ಚಿತ್ರಣವಿದೆ. ಇದಕ್ಕೆ ಹೊಂದಿಕೊಂಡಂತೆ ಅಂತರಾಳವಿದ್ದು, ಇಲ್ಲಿನ ಸ್ತಂಭಗಳ ಮೇಲೆ ಕುಸುರಿ ಕೆತ್ತನೆಯುಳ್ಳ ಮಕರ ತೋರಣವಿದ್ದು, ಇವುಗಳಲ್ಲಿ ರಂಧ್ರಗಳನ್ನು ಕೊರೆಯಲಾಗಿದೆ. ಈ ರಂದ್ರಗಳಲ್ಲಿ ಬ್ರಹ್ಮ, ಶಿವ ಮತ್ತು ವಿಷ್ಣುವಿನ ಕಿರು ಶಿಲ್ಪಗಳು ಸಮಭಂಗಿಯಲ್ಲಿವೆ. ಸ್ತಂಭಗಳ ಇಕ್ಕೆಲಗಳಲ್ಲಿ ಅಷ್ಟಕೋನಾಕೃತಿಯ ಜಾಲಾಂಧ್ರಗಳಿದ್ದು, ವಿತಾನದಲ್ಲಿ ಅರಳಿದ ಪದ್ಮವಿದೆ. ಅಂತರಾಳಕ್ಕೆ ಹೊಂದಿಕೊಂಡಂತೆ ನಾಲ್ಕು ಸ್ತಂಭಗಳುಳ್ಳ ನವರಂಗವಿದ್ದು, ಮಧ್ಯದಲ್ಲಿ ಕುಳಿತ ನಂದಿ ಇದೆ. ಇದರ ಪ್ರವೇಶದ್ವಾರವು ಪಂಚಶಾಖಾಲಂಕಾರದಿಂದ ಕೂಡಿದ್ದು, ಲಲಾಟ ಪಟ್ಟಿಕೆಯಲ್ಲಿ ಗಜಲಕ್ಷ್ಮೀಯ ಚಿತ್ರಣವಿದೆ. ಗಜಗಳು ತಮ್ಮ ಮುಂದಿನ ಎರಡು ಕಾಲುಗಳನ್ನು ಮೇಲೆತ್ತಿ ತಮ್ಮ ಸೊಂಡಿಲಿನಿಂದ ನೀರನ್ನು ತೆಗೆದುಕೊಂಡು ಲಕ್ಷ್ಮಿಗೆ ಅಭಿಷೇಕ ಮಾಡುತ್ತಿವೆ.

ಇದರ ಉತ್ತರಾಂಗದಲ್ಲಿ ಪಂಚಶಿಖರಗಳಿದ್ದು, ಒಂದು ದ್ರಾವಿಡ ಮಾದರಿಯಲ್ಲಿದ್ದರೆ, ಮತ್ತೆರಡು ಶಿಖರಗಳು ಲತಿನರೇಖಾನಾಗರ ಮಾದರಿಯಲ್ಲಿರುವುದು ಇದೊಂದು ವಿಶೇಷತೆ. ನವರಂಗಕ್ಕೆ ಹೊಂದಿಕೊಂಡಂತೆ ಸಭಾಮಂಟಪವಿದ್ದು, ಇಲ್ಲಿ ೨೬ ಸ್ತಂಭಗಳಿವೆ. ಇಲ್ಲಿನ ಸ್ತಂಭಗಳಲ್ಲಿ ಮೂರು ಪ್ರಕಾರಗಳಿದ್ದು, ಇದರಲ್ಲಿ ಮಧ್ಯದ ನಾಲ್ಕು ಸ್ತಂಭಗಳು ಪೀಠ, ಕಾಂಡದಲ್ಲಿ ಚೌಕುವೃತ್ತಾಕಾರದ ದಿಂಡುಗಳು, ಘಂಟಾಕೃತಿ, ಕಲಶ ಮತ್ತು ಸರಳಬೋಧಿಗೆಯಿಂದ ಕೂಡಿವೆ. ಹಾಗೆಯೇ ಈ ಸ್ತಂಭಗಳ ಸುತ್ತ ಆರು ಸ್ತಂಭಗಳಿದ್ದು, ಇವು ಭಿನ್ನತೆಗಳಿಂದ ಕೂಡಿವೆ. ಇಲ್ಲಿನ ಸ್ತಂಭಗಳು ಪೀಠ, ಕಾಂಡದಲ್ಲಿ ವೃತ್ತ, ಘಂಟಾಕೃತಿ, ಕಲಶ, ಫಲಕ ಮತ್ತು ಸರಳಬೋದಿಗೆಯಿಂದ ಕೂಡಿದವುಗಳಾಗಿವೆ. ಜೊತೆಗೆ ಇಲ್ಲಿನ ಸ್ತಂಭಗಳು ಪೀಠದಿಂದ ಕಾಂಡದ ತುದಿಯವರೆಗೂ ನೀಳಚೂಪಕೋನಗಳನ್ನು ಹೊಂದಿವೆ.

ಭಿತ್ತಿಯ ಮೂಲೆಯಲ್ಲಿ ೧೬ ಅರೆಸ್ತಂಭಗಳಿದ್ದು, ಇವುಗಳು ವೃತ್ತಾಕಾರದ ಕಲಶ, ಫಲಕ ಮತ್ತು ಸರಳ ಬೋದಿಗೆಗಳಿಂದ ಕೂಡಿದೆ. ಸಭಾಮಂಟಪಕ್ಕೆ ಮೂರು ಪ್ರವೇಶ ದ್ವಾರಗಳಿದ್ದು, ಪ್ರಸ್ತುತ ದಕ್ಷಿಣದ ದ್ವಾರವನ್ನು ಮುಚ್ಚಲಾಗಿದೆ. ಜೊತೆಗೆ ಉತ್ತರ ಮತ್ತು ಪೂರ್ವದ ದಿಕ್ಕುಗಳಿಗೆ ಪ್ರವೇಶದ್ವಾರಗಳಿದ್ದು, ವಿತಾನದಲ್ಲಿ ಅರಳಿದ ಒಂಬತ್ತು ಪದ್ಮಗಳ ಅಲಂಕರಣೆಯಿದೆ. ಈ ದೇವಾಲಯಕ್ಕೆ ಪ್ರವೇಶದ್ವಾರವು ಪೂರ್ವದಿಕ್ಕಿಗಿದ್ದು, ಇದರ ದ್ವಾರಬಂಧವು ಪಂಚಶಾಖೆಗಳಿಂದ ಕೂಡಿದೆ. ಜೊತೆಗೆ ಲಲಾಟ ಪಟ್ಟಿಕೆಯಲ್ಲಿ ಜಗಲಕ್ಷ್ಮೀ ಚಿತ್ರಗಳಿವೆ. ಮತ್ತು ದೇವಾಲಯದ ಬಾಹ್ಯಭಿತ್ತಿಯು ಸಂಪೂರ್ಣವಾಗಿ ಜೀರ್ಣೋದ್ಧಾರವಾಗಿದೆ.[೪]



**ಅಡಿ ಟಿಪ್ಪಣಿಗಳು**

೧. ಸೂರ್ಯನಾಥ ಕಾಮತ್(ಸಂ), ೧೯೯೫, ಧಾರವಾಡ ಜಿಲ್ಲಾ ಗೆಜೆಟಿಯರ್, ಪು. ೭.
೨. ರಾಮಚಂದ್ರರಾವ್ ಎಸ್.ಕೆ., ೧೯೯೪, ಗುಡಿ ಜನರ ಜೀವನಾಡಿ, ಪು. ೧.
೩. ಚಿದಾನಂದಮೂರ್ತಿ ಎಂ., ೧೯೭೯, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೧೭೫-೧೭೬.
೪. ರಾಮಯ್ಯಂಗಾರ್ ಎಸ್.ಕೆ., ೧೯೯೯, ಕೆಲವು ಧಾರ್ಮಿಕ ಕರ್ತವ್ಯಗಳು, ಪು. ೭೭-೮೦.
೫. ಜಯಮ್ಮ ಬಿ., ೨೦೧೦, ಧಾರವಾಡ ಜಿಲ್ಲೆಯ ಪುರಾತತ್ವ, ಪು. ೧೨೨-೧೨೩.
೬. ಗೆರಾಲ್ಡ್, ೨೦೦೩, ಚಾಲುಕ್ಯ ಆರ್ಕಿಟೆಕ್ಚರ್, ಪು. ೪೨೬.
೭. ಗೆರಾಲ್ಡ್, ಪೂರ್ವೋಕ್ತ, ಪು. ೪೫೯.
೮. ಜಯಮ್ಮ, ಪೂರ್ವೋಕ್ತ, ಪು. ೧೫೩-೧೫೫.

K. E. BOARD'S FIRST GRADE ARTS & COMMERCE COLLEGE DHARWAD-6 COLLEGE CODE: 9218

PRINCIPAL
K. E. Board's
First Grade Arts & Commerce College,
Shivaji Circle, Savadatti Road, Dharwad-6

ಸ್ಥಾಪನೆ: 2003 ✆ : 2747813

ಕೆ. ಇ. ಬೋರ್ಡಿನ ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ
ಶಿವಾಜಿ ಸರ್ಕಲ್, ಸವದತ್ತಿ ರಸ್ತೆ, ಧಾರವಾಡ-6

K. E. Board's First Grade Arts and Commerce College
Shivaji Circle, Savadatti Road, Dharwad-6
*(College Code No-1218)*

---

## Shaiva Temples of Kundagol Taluk.

**Kundagol is Taluka place in Dharwad District. This is 26 km away from Dharwad.**

Kundagol come under the rule Chalukkyas, Rashtrakoota, KAlachoori,Yadavas of Devagiri,Hoisalas and Kadambas of Hanagalla. These rulers heve left behind them the art and culture of their period. The different dynasties have got different cultural heritage and literature, which evidently show the changes that took place from time to time Shavism was at its best during these rulers who built Shiva Temples.

K. E. BOARD'S FIRST GRADE ARTS & COMMERCE COLLEGE
DHARWAD-6
COLLEGE
CODE: 1218

PRINCIPAL
K. E. Board's
First Grade A... & Commerce College,
Shivaji Circle, ... Road, Dharwad-6